# GOVERNMENT OF KARNATAKA

No. KE 20 LMW 2017

Government of Karnataka Legislature
Vikas Soudha
Bengaluru, Date : 30-12-2017

## NOTIFICATION

Government has decided to fix the Minimum Wages for any category of employees who come under the purview of 'Shops and Commercial Establishments' in the State of Karnataka and the Minimum Wages Table are released as below. This Notification was released under the provisions of Minimum Wages Act, 1948 (Central Act No. XI) Rule 3(1)(b) and 5(1)(b) and was published under No. KE 20 LMW 2017, Bengaluru dated 28-04-2017 in Karnataka Rajya Patra Part 4A from Page No. 4476 to 4480 dated 22/06/2017 wherein it had sought objections/suggestions from affected person from the Employer / Employee / Association Orgnisation, within TWO MONTHS from the date of this Draft Notification. During the said period, the State Government has received several objections/suggestions from all the concerned for consideration.

State Government in its Letter No. KE 02 LMG 2017 dated 08-11-2017 had called on for meeting of members of Karnataka Minimum Wages Committee to discuss the Draft Notification and as accordingly as per the rules on 06-12-2017 the Karnataka Minimum Wages Committee discussed on the Draft Notification and the objections/suggestions filed and after detailed discussions the Committee decided to forward its recommendations to the Government to release the final notification.

Hence, based on the recommendations by the Karnataka Minimum Wages Committee, the State of Karnataka under rights provided to the State Government under the provisions of Minimum Wages Act, 1948 (Central Act No. XI) Rule 3(1)(b) and 5(1)(b) hereby terminates all prior notifications and for any category of employees who come under the purview of the Establishment of 'Shops and Commercial Establishments' from the date of applicability of this notification the below Minimum Wages Rates will be applicable. The below stated Table will be applicable under the Rule 12 of the Minimum Wages Act, 1948 and all Employers covered under the Act shall ensure the implementation.

## MINIMUM WAGES RATES TABLE

## SHOPS AND COMMERCIAL ESTABLISHMENTS

| Class of Works | Zone 1 | | Zone 2 | | Zone 3 | | Zone 4 | |
|---|---|---|---|---|---|---|---|---|
| | Monthly | Daily | Monthly | Daily | Monthly | Daily | Monthly | Daily |
| **HIGHLY SKILLED WORKERS** | | | | | | | | |
| Pharmacist & Chemist, Medical Supervisor & other Highly Skills | 15423.4 | 593.21 | 14688.95 | 564.96 | 13989.48 | 538.06 | 13323.31 | 512.44 |
| **SKILLED WORKERS** | | | | | | | | |
| Sales Man / Sales Girl, Compounder, Photo Artist, Photographer, Watch Mechanic/Repairer, Radio Mechanic/Repairer, TV Mechanic/Repairer, Optical Mechanic/Repairer, Employees in Instituting Lifts, Technicians/Mechanic, Instrument Shop, Carpenter/Polisher (Furniture Shop), Optician (Optical Shop), Hair Dresser (Hair Dressing Saloon), Plant Operator, Umbrella & Suitcase Makers. | 14021.27 | 539.28 | 13353.59 | 513.60 | 12717.71 | 489.14 | 12112.1 | 465.85 |
| **SEMI-SKILLED WORKERS** | | | | | | | | |
| Bill Collector, Bill Clerk, Godown Keeper, Booking Clerk, Assistant Salesman/Sales Girl, Assistant Photo Artist, Shop Assistant, Packer, Gas Transporter, Stove Repairer, Painter, Fruit/Lassi Makers in Shop. | 12746.61 | 490.25 | 12139.63 | 466.91 | 11561.55 | 444.68 | 11011 | 423.50 |
| **UNDER SKILLED WORKERS** | | | | | | | | |
| Messenger, Naimangmen, Cycle Fitter, Laundryman, Dry Cleaner, Ironing, Employees who Loading/Unloading & Weighing in Ware House/Godowns/Store Rooms. Employees engaged for Stitching and other general employees who are considered in the other Categories. | 11587.83 | 445.69 | 11036.03 | 424.46 | 10510.5 | 404.25 | 10010 | 385.00 |

## OFFICE STAFF AND DRIVERS

| Details of Designations | Zone 1 | | Zone 2 | | Zone 3 | | Zone 4 | |
|---|---|---|---|---|---|---|---|---|
| | Monthly | Daily | Monthly | Daily | Monthly | Daily | Monthly | Daily |
| Manager, Personnel Officer, Marketing Manager, Categories overseeing the Office Administration. | 16423 | 631.65 | 15688 | 603.38 | 14989 | 576.50 | 14323 | 550.88 |
| Assistant Manager, Assistant Personnel Manager, Senior Accoutant and equal designations. | 15423.4 | 593.21 | 14688.95 | 564.96 | 13989.48 | 538.06 | 13323.31 | 512.44 |
| Senior Clerk, Cashier, Writer, Stenographer, Store Keeper, Receiptionist and equal designations. | 14021.27 | 539.28 | 13353.59 | 513.60 | 12717.71 | 489.14 | 12112.1 | 465.85 |
| Junior Clerk, Booking Clerk, Computer Operator, Typist, Telephone Operator, Data Entry Operator and equal designations. | 12746.61 | 490.25 | 12139.63 | 466.91 | 11561.55 | 444.68 | 11011 | 423.50 |
| Jawan, Watchman, Lift Operator, Office Boy, Attender, Helper/Assistant, Sweeper and equal designations. | 11587.83 | 445.69 | 11036.03 | 424.46 | 10510.5 | 404.25 | 10010 | 385.00 |
| Heavy Vehicle Driver, Tractor Driver, Multiple Axel Vehicle Driver, Earth Movers, Crane Drivers, Road Roller and other Drivers engaged in Road Construction. | 14021.27 | 539.28 | 13353.59 | 513.60 | 12717.71 | 489.14 | 12112.1 | 465.85 |
| Car Driver, Jeep Driver, Light Utility Vehicles. | 12746.61 | 490.25 | 12139.63 | 466.91 | 11561.55 | 444.68 | 11011 | 423.50 |
| Tum Tum, Three Wheeler Drivers. | 11587.83 | 445.69 | 11036.03 | 424.46 | 10510.5 | 404.25 | 10010 | 385.00 |

Government has established the above Minimum Wages based on the below calculation and all Employers are directed to implement.

1. **Dearness Allowance Calculation and Payment :**

Dearness Allowance shall be calculated once in a year. It shall be calculated from 1st day of April for every year on the basis of last calendar year average of 12 months and in case of increase/decrease shall be calculated on the basis of annual Average on consumer Price list. Hence the first calculation of consumer rate list shall be come into effect on 1st April of 2017, on the basis of (Jan-2016 to Dec-2016). Consumer Price Index is 6537 for all categories of employees and shall be calculated and payable at 0.04 paise.

**METHOD OF CALCULATION OF DA**

A. Personnel receiving Monthly Wages

**Increase in CPI Points for the Year X Rate of DA Amount X 30 days**

In case of Daily Wage earners the monthly rates shall be calculated by dividing 26 days and including 4 holiday wages. Divided earnings can be rounded off to the nearest rupee.

B. Personnel receiving Daily Wages

**Increase in CPI Points for the Year X Rate of DA Amount X 30 days / 26**

2. **Service Weightage Allowance :** The day this notification comes to effect, any employee who works in an Establishment or under the same Employer continuously for (10) years, for having completed every year of service (1) percent on the overall monthly wages to be paid as Service Weightage Allowance and will be eligible for a maximum of 10 percent. ***However, the day this notification comes to effect, any employee who works for more than (20) years, such employees will be eligible for one time service weightage allowance of maximum of 10 percent***. Service Weightage Allowance to be calculated and paid excluding the DA as mentioned in Sl. No. 1.

**Explanation : "Continuous Service to be considered for the previous year, i.e. employee should have worked continuously for not less 240 days in an Establishment."**

3. **Equal Wages to Female Employees :** Employer to ensure Wages are paid equally to Male and Female incase they are doing similar job in the Establishment as under Equal Remuneration Act, 1976.

4. **Protection of Employees Rights :** If any employee as stated in this Notification is paid more than the specified Minimum Wages in their Area or by their Establishment under agreement under Industrial Disputes Act, 1947, that shall be continued to be implemented and shall be considered as the Minimum Wages for them.

5. **Equal Pay for Similar Work** : The workers range/class which are not mentioned in the schedule, shall be paid as per the payment of similar co-workers. Incase of any dispute in the matter, Employer will setup a committee of 9 members which will be represented by 3 from independent observers, 3 from Employers and 3 representatives from the employee and post discussion to implement the recommendations by the committee within 2 months. The Employer will appoint 'Working Officer' to ensure smooth implementation of the recommendations of the Committee. Further continuation of the dispute, the Employer can appoint 'Executive Officer' and the recommendations of the 'Working Officer' and the 'Executive Officer' needs to implemented within one month of circulation. Decision of the 'Executive Officer' will be considered as final and all parties will agree to it.

6. **Protection of Minimum Wages** : Part time workers wages shall be paid for 8 hours not lesser than the wages paid for one day to the similar co-worker. One day shall be calculated for 8 hours. If the employee works for less than 8 hours, wages shall be calculated and paid for the full day. Incase of any dispute in this regard, the Employer can refer the matter by following the procedure as stated in the above clause 5.

7. **Minimum Wages towards Working Hours :** A Day shall be considered for 8 hours. If the employee works for less than 8 hours, wages shall be calculated and paid on the daily average as per rule 27 of the Karnataka Minimum Wages Act, 1958.

8. **Method of Payment of Minimum Wages** : Employer shall ensure payment of Fixed Basic Wages & Dearness Allowance shall be rounded off to the nearest rupee.

9. **Payments through Bank** : Under Section 6 of the Payment of Wages Act, 1936, Employer shall ensure that Wages to the employees are directly credited to the respective bank accounts.

10. **Minimum Wages to Contract Labourers** : Wherever the Establishment has engaged employees under The Contract Labour (Abolition & Regulation) Act, 1970, Employer shall ensure that implementation Minimum Wages under this Act and applicability of all other applicable Acts to such employees.

11. Social Security Implementation : Employer shall ensure implementation of the following Social Security Implementation and required deduction shall be made from (Basic + Dearness) payable to the employee and shall be remitted from the Employers account and this (employer contribution) should not be deducted from the employees.

    1. Employees' State Insurance Act, 1948
    2. Employees' Provident Fund & Miscellaneous Provisions Act, 1952.

12. **Wages on Holidays** : Any employee working on Weekly off or Festival Holiday, double of the daily wages shall be paid, under the provisions of the Minimum Wages Act 1948 & Karnataka Industrial Establishments (National & Festival Holidays) Act, 1963.

13. **Wages of extra work** : Employee working more than their specified hours in a day, he shall be entitled to wages at the rate of twice as per the Section 14 of the Minimum Wages Act, 1948.

14. **Wages to Apprentices** : Any Employer who appoints Apprentices under the Apprentices Act, 1961 such Apprentices shall be paid as per their applicable Act and Rules.

15. **Wages for Trainees** : Any Establishment wherein the Employer engaged Trainees, during the training period the Trainees shall be paid 75% of the employees working in that category of work as stated under the Industrial Employment (Standing Orders) Act, 1946.

16. **Wages during Government Schemes / Programs** : Excluding above clause No. 11 & 12, employees getting trained shall be paid the Minimum Wages. Incase of any training or programs being conducted by Central Government/State Government, Employers shall pay the Minimum Wages as applicable to the trainees.

17. **Continuation of Benefits** : If existing wages and facilities to the employees are more beneficial than as specified in this notification, employees will continue to enjoy such wages and facilities.

18. **Wages to Physically Challenged** : Incase physically challenged employees are working in the Establishment, they will be paid equally at par with that of normal employees under the provisions of **Equal Opportunities**, Protection of Rights and Full Participation) **Act,1995**.

19. **Mandatory Payment of Minimum Wages** : It is mandatory to ensure that Minimum Wages and due DA is calculated and paid from time to time.

20. Category of Employees :
Category of Employees have been split under 4 categories as under.

i) Unskilled Workers
Unskilled works is one which involves simple operations requiring little or more no skill or experience on the job.

ii) Semi Skilled Workers
Semi Skilled work is one which involves some degree of skill acquired through experience on the job and which is capable of being performed under the supervision and guidance of skilled workmen.

iii) Skilled Workers
Skilled work is one which involves skill acquired through experience on the job or through training as apprentice in a Technical or Vocational Institution and the performance of which for initiating accuracy and judgement.

iv) Highly Skilled
Highly Skilled means a person having higher proficiency of work capable of precisely performing work such as map reading and supervise the work of skilled and other categories of workers, who are working under him. He/She is capable of giving directions to his subordinate workers and can independently work in a given section.

21. Zones have been notified as under :
Zone 1 - Brahut Bengaluru Mahanagar Palike Range.
Zone 2 - All other Corporations in the State and identified agglomerated areas.
Zone 3 - Any other region apart from Zone 2.
Zone 4 - Any other region apart from Zone 2 & 3.

IN THE NAME & BY ORDER OF
GOVERNOR OF KARNATAKA

SD/-
LS SHRIKANTABABU
DEPUTY SECRETARY
DEPARTMENT OF LABOUR

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೫೩<br>Volume 153 | ಬೆಂಗಳೂರು, ಗುರುವಾರ, ಮಾರ್ಚ್ ೨೯, ೨೦೧೮ (ಚೈತ್ರ ೮, ಶಕ ವರ್ಷ ೧೯೪೦)<br>Bengaluru, Thursday, March 29, 2018 (Chaithra 8, Shaka Varsha 1940) | ಸಂಚಿಕೆ ೧೩<br>Issue 13 |
|---|---|---|


## ಕಾರ್ಮಿಕ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ : ಕಾಇ 20 ಎಲ್‌ಎಂಡಬ್ಲ್ಯೂ 2017 ಬೆಂಗಳೂರು, ದಿನಾಂಕ: 30-12-2017**

ಕರ್ನಾಟಕ ರಾಜ್ಯದಾದ್ಯಂತ **"ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು (Shops and Commercial Establishments)"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲುದ್ದೇಶಿಸಿ, ರಾಜ್ಯ ಸರ್ಕಾರವು ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5 (1)(ಬಿ) ರ ಪ್ರಾವಧಾನದನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆ ಸಂಖ್ಯೆ: ಕಾಇ 20 ಎಲ್‌ಎಂಡಬ್ಲ್ಯೂ 2017, ಬೆಂಗಳೂರು ದಿನಾಂಕ: 28-04-2017 ಅನ್ನು ಕರ್ನಾಟಕ ರಾಜ್ಯಪತ್ರದ ಭಾಗ 4ಎ ಭಾಗ ಪುಟ ಸಂಖ್ಯೆ: 4476 ರಿಂದ 4480 ರಲ್ಲಿ ದಿನಾಂಕ: 22 ನೇ ಜೂನ್ 2017 ರಂದು ಪ್ರಕಟಿಸಿರುತ್ತದೆ ಹಾಗೂ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ-ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಹಲವು ನಿರ್ದಿಷ್ಟವಾದ ಹಾಗೂ ಸಾಮಾನ್ಯವಾದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಂಬಂಧಿಸಿದವರಿಂದ ರಾಜ್ಯ ಸರ್ಕಾರವು ಸ್ವೀಕರಿಸಿರುತ್ತದೆ.

ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ: ಕಾಇ 02 ಎಲ್‌ಎಮ್‌ಡಬ್ಲ್ಯೂ 2017 ದಿನಾಂಕ: 08-11-2017 ರ ಮೂಲಕ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯನ್ನು ಕರೆದು ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವಂತೆ ಸೂಚಿಸಲಾಗಿ, ದಿನಾಂಕ: 06-12-2017 ರಂದು ನಿಯಮಾನುಸಾರ ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಮೇಲ್ಕಂಡ ಕರಡು ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಲಾದ ಸಲಹೆಗಳು ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ, **ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.**

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 06-12-2017ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಬಿ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯದಾದ್ಯಂತ **"ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು (Shops and Commercial Establishments)"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ **ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ** ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

<u>ಕನಿಷ್ಠ ವೇತನ ದರಗಳ ಕೋಷ್ಟಕ</u>

"ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು (Shops and Commercial Establishments)"

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | | ವಲಯ-4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| <u>ಅತಿ ಕುಶಲ ಕಾರ್ಮಿಕರು</u><br>ಫಾರ್ಮಸಿಸ್ಟ್ & ಕೆಮಿಸ್ಟ್<br>ಟೆಕ್ನಿಕಲ್ ಸೂಪರ್‌ವೈಸರ್<br>ಇತರೆ ಅತಿಕುಶಲ ಕೆಲಸಕ್ಕೆ | **15423-40** | **593-21** | **14688-95** | **564-96** | **13989-48** | **538-06** | **13323-31** | **512-44** |

| ಕೆಲಸದ ವರ್ಗೀಕರಣ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| **ಕುಶಲ ಕಾರ್ಮಿಕರು** ಸೇಲ್ಸ್ ಮನ್ / ಸೇಲ್ಸ್ ಗರ್ಲ್ ಕಾಂಪೌಂಡರ್, ಫೋಟೋ ಆರ್ಟಿಸ್ಟ್, ಫೋಟೋಗ್ರಾಫರ್ ವಾಚ್ ಮೆಕ್ಯಾನಿಕ್ / ರಿಪೇರರ್, ರೇಡಿಯೋ ಮೆಕ್ಯಾನಿಕ್ / ರಿಪೇರರ್, ಟಿ.ವಿ ಮೆಕ್ಯಾನಿಕ್/ ರಿಪೇರರ್, ಆಪ್ಟಿಕಲ್ ಮೆಕ್ಯಾನಿಕ್ / ರಿಪೇರರ್ ಲಿಫ್ಟ್ ಜೋಡಿಸಿ ಸ್ಥಾಪಿಸುವ ಕುಶಲ ಕೆಲಸಗಾರ, ಟೆಕ್ನಿಷಿಯನ್/ ಮೆಕ್ಯಾನಿಕ್ ಇನ್‌ಸ್ಟ್ರುಮೆಂಟ್ ಶಾಪ್ ಕಾರ್ಪೆಂಟರ್ (ಫರ್ನಿಚರ್ ಶಾಪ್), ಪಾಲಿಷರ್ (ಫರ್ನಿಚರ್ ಶಾಪ್) ರಿಫ್ರಾಕ್ಷನರಿಯನ್ (ಆಪ್ಟಿಕಲ್ ಶಾಪ್), ಹೇರ್ ಡ್ರೆಸರ್ (ಹೇರ್ ಡ್ರೆಸಿಂಗ್ ಸಲೂನ್) ಏರ್‌ಕಂಡೀಷನ್ ಪ್ಲಾಂಟ್ ಆಪರೇಟರ್, ಅಂಬ್ರೆಲಾ ಸೂಟ್‌ಕೇಸ್ ಮೇಕರ್ ಇತರೆ ಕುಶಲ ಕೆಲಸಕ್ಕೆ | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| **ಅರೆ ಕುಶಲ ಕಾರ್ಮಿಕರು** ಬಿಲ್ ಕಲೆಕ್ಟರ್, ಬಿಲ್ ಕ್ಲರ್ಕ್, ಗೋಡೌನ್ ಕೀಪರ್, ಬುಕ್ಕಿಂಗ್ ಕ್ಲರ್ಕ್, ಅಸಿಸ್ಟೆಂಟ್ ಸೇಲ್ಸ್‌ಮನ್/ ಸೇಲ್ಸ್ ಗರ್ಲ್ ಅಸಿಸ್ಟೆಂಟ್ ಪೋಟೋ ಆರ್ಟಿಸ್ಟ್, ಶಾಪ್ ಅಸಿಸ್ಟೆಂಟ್ ಪ್ಯಾಕರ್, ಗ್ಯಾಸ್ ಸರಬರಾಜು ಮಾಡುವವ, ಸ್ಟವ್ ರಿಪೇರಿ ಮಾಡುವವ, ಪೇಂಟರ್ ಪ್ರೂಟ್ ಜ್ಯೂಸ್ ಅಥವಾ ಲಸ್ಸಿ ಮೇಕರ್ ಇನ್ ಶಾಫ್ ಇತರೆ ಅರೆಕುಶಲ ಕೆಲಸಕ್ಕೆ | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| **ಅಕುಶಲ ಕಾರ್ಮಿಕರು** ಮೆಸ್ಸೆಂಜರ್, ವೇಯಿಂಗ್ ಮೆನ್ ಬೈಸಿಕಲ್ ಫಿಟ್ಟರ್ ಲಾಂಡ್ರಿಗಳಲ್ಲಿ ಬಟ್ಟೆ ಒಗೆಯುವುದು, ಒಣಗಿಸುವುದು ಹಾಗೂ ಇಸ್ತ್ರಿ ಮಾಡಿ ಜೋಡಿಸುವ ಕಾರ್ಮಿಕರು ಮತ್ತು ವೇರ್ ಹೌಸ್ ಗೋಡೌನ್ಸ್, ಹಾಗೂ ಸ್ಟೋರ್ ರೂಮ್ಸ್ ಗಳಲ್ಲಿ | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

| ಕೆಲಸದ ವರ್ಗೀಕರಣ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಲೋಡಿಂಗ್ ಅಂಡ್ ಅನ್‌ಲೋಡಿಂಗ್, ಮತ್ತು ಅಳತೆ/ತೂಕ ಮಾಡುವವರು. ವರ್ಕರ್ಸ್ ಎಂಗೇಜ್ಡ್ ಇನ್ ಗ್ರೈಂಡಿಂಗ್ ಸರ್ವೀಸಸ್ ಗೋಣಿಚೀಲ ಹೊಲಿಯುವವರು ಜನರಲ್ ವರ್ಕರ್ಸ್ (ಮೇಲೆ ಕಾಣಿಸಿದ ಯಾವುದೇ ವರ್ಗದಲ್ಲಿ ಸೂಚಿಸದೇ ಇರುವ ಆಡಳಿತ ಮತ್ತು ಕ್ಲೆರಿಕಲ್ ಸೇವೆಗಳನ್ನು ಬಿಟ್ಟು ಎಲ್ಲಾ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು. ಇತರೆ ಅಕುಶಲ ಕೆಲಸಕ್ಕೆ | | | | | | | | |

**ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು**

| ಹುದ್ದೆಗಳ ವಿವರ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ, | 16423–00 | 631–00 | 15688–00 | 603–38 | 14989–00 | 576–50 | 14323–00 | 550–88 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | 15423–40 | 593–21 | 14688–95 | 564–96 | 13989–48 | 538–06 | 13323–31 | 512–44 |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್‌ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ. | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಪರೇಟರ್, ಟೈಪಿಸ್ಟ್, ಟೆಲಿಪೋನ್ ಆಪರೇಟರ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಜವಾನ, ವಾಚ್ಮನ್, ಲಿಫ್ಟ್ ಆಪರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ಸಹಾಯಕ, | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

| ಹುದ್ದೆಗಳ ವಿವರ | ವಲಯ–1 | | ವಲಯ–2 | | ವಲಯ–3 | | ವಲಯ–4 | |
|---|---|---|---|---|---|---|---|---|
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | | | | | | | | |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 14021–27 | 539–28 | 13353–59 | 513–60 | 12717–71 | 489–14 | 12112–10 | 465–85 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು | 12746–61 | 490–25 | 12139–63 | 466–91 | 11561–55 | 444–68 | 11011–00 | 423–50 |
| ಟಂ ಟಂ, ತ್ರಿಚಕ್ರ ವಾಹನ ಚಾಲಕರು | 11587–83 | 445–69 | 11036–03 | 424–46 | 10510–50 | 404–25 | 10010–00 | 385–00 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;**

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತಿ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2016 ರಿಂದ ಡಿಸೆಂಬರ್ 2016ರ) ಸರಾಸರಿ ಆಧಾರದ ಮೇಲೆ 2017 ಏಪ್ರಿಲ್ ಒಂದನೇ (1) ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

ಅ) **ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು**

ಆ) **ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x** ಮೂವತ್ತು(30) ದಿನಗಳು / ಇಪ್ಪತ್ತಾರು (26)

2. **ಸೇವಾ ಹಿರಿತನ ಪರಿಗಣನೆ ಭತ್ಯೆ :** ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಯಾವುದೇ ಕಾರ್ಮಿಕನು ಒರ್ವ ಉದ್ಯೋಗದಾತರ ಸಂಸ್ಥೆಯಲ್ಲಿ ಅಥವಾ ಮಾಲೀಕರ ಅಧೀನದಲ್ಲಿ ನಿರಂತರ ಹತ್ತು (10) ವರ್ಷಗಳ ಸೇವೆಯನ್ನು ಸಲ್ಲಿಸಿದಲ್ಲಿ, ತನ್ನ ಪೂರ್ಣಗೊಳಿಸಿದ ಪ್ರತಿ ಹತ್ತು ವರ್ಷದ ಮೇಲ್ಪಟ್ಟ ಸೇವೆಗೆ ಅನುಗುಣವಾಗಿ ಆಯಾ ಕಾರ್ಮಿಕ ವರ್ಗಕ್ಕೆ ನಿಗದಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ಮೂಲ ವೇತನದ ಮೇಲೆ ವರ್ಷವೊಂದರ ಸೇವೆಗೆ ಶೇಕಡಾ ಒಂದ (1) ರಷ್ಟು ಮೊತ್ತವನ್ನು ಸೇವಾ ಹಿರಿತನ ಪರಿಗಣನೆ ಭತ್ಯೆಯನ್ನಾಗಿ ಗರಿಷ್ಠ ಶೇಕಡಾ ಹತ್ತು (10) ರ ಮೇಲ್ಮಿತಿಗೆ ಒಳಪಟ್ಟು

ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ. ಪರಂತು ಈ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಇಪ್ಪತ್ತು (20) ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ ಕಾರ್ಮಿಕರಿದ್ದಲ್ಲಿ ಒಂದು ಸಲಕ್ಕೆ ಮಾತ್ರ ಸೇವಾ ಹಿರಿತನ ಮೊತ್ತವನ್ನು ಆಯಾ ಕಾರ್ಮಿಕ ವರ್ಗಕ್ಕೆ ನಿಗಧಿಪಡಿಸಿರುವ ಒಟ್ಟು ಮಾಸಿಕ ಕನಿಷ್ಠ ವೇತನದ ಶೇ 10ರ ಗರಿಷ್ಠಮಿತಿಗೆ ಒಳಪಟ್ಟು ಪಡೆಯಲು ಅರ್ಹರಿರುತ್ತಾರೆ. ಈ ಸೇವಾ ಹಿರಿತನ ಪರಿಗಣನೆ ಭತ್ಯೆಯ ಮೊತ್ತವು ಮೇಲ್ಕಂಡ ಷರತ್ತು ಸಂಖ್ಯೆ 1ರಲ್ಲಿ ವಿಧಿಸಿದ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಹೊರತುಪಡಿಸಿ, ಮೂಲವೇತನದ ಆಧಾರದಲ್ಲಿ ನಿಗದಿಪಡಿಸಿದ 'ಸೇವಾ ಹಿರಿತನದ ಪರಿಗಣನೆ ಭತ್ಯೆಯ ಮೊತ್ತ' ವಾಗಿರುತ್ತದೆ.

***ವಿವರಣೆ:*** "ನಿರಂತರ ಸೇವೆಯನ್ನು ಲೆಕ್ಕ ಮಾಡಬೇಕಾದಾಗ ಹಿಂದಿನ ಆರ್ಥಿಕ ವರ್ಷದಲ್ಲಿ, ಸದರಿ ಸಂಸ್ಥೆಯಲ್ಲಿ ಕನಿಷ್ಠ ಎರಡು ನೂರ ನಲವತ್ತು (240) ದಿನಗಳು ಸೇವೆ ಸಲ್ಲಿಸಿದ ಕಾರ್ಮಿಕನು ಸದರಿ ವರ್ಷದಲ್ಲಿ ನಿರಂತರ ಸೇವೆ ಸಲ್ಲಿಸಿರುತ್ತಾನೆಂದು ಉದ್ಯೋಗದಾತರು ಪರಿಗಣಿಸತಕ್ಕದ್ದು"

3. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ-1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

4. **ಕಾರ್ಮಿಕರ ಹಕ್ಕುಗಳ ರಕ್ಷಣೆ:** ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ವೇತನದ ದರಗಳಿಗಿಂತ ಹೆಚ್ಚಿನ ವೇತನವನ್ನು ಈಗಾಗಲೇ ಕೈಗಾರಿಕಾ ವಿವಾದಗಳ ಕಾಯ್ದೆ-1947 ರಡಿಯಲ್ಲಿಯ ಒಪ್ಪಂದ, ಕರಾರು ಅಥವಾ ಬೇರೆ ಯಾವುದೇ ರೀತಿಯನ್ವಯ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರು ಬಾಧ್ಯಸ್ಥರಿರುತ್ತಾರೆ.

5. **ಸಮರೂಪದ ಕೆಲಸದ ವರ್ಗಗಳಿಗೆ ಸಮನಾದ ವೇತನ:** ಈ ಅಧಿಸೂಚನೆಯಲ್ಲಿ ಕೆಲಸದ ಸ್ವರೂಪದ ವರ್ಗವನ್ನು ನಮೂದಿಸದೇ ಇರುವ ಕೆಲಸದ ಸ್ವರೂಪದ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ಕೆಲಸದ ಸ್ವರೂಪದ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು. ಈ ಕುರಿತು ಯಾವುದೇ ವಿವಾದ ಉದ್ಭವಿಸಿದಲ್ಲಿ, ಸಂಬಂಧಿಸಿದ ಉದ್ಯೋಗದಾತರು ಒಂದು ತ್ರಿಪಕ್ಷಿಯ (ಸ್ವತಂತ್ರ ಸದಸ್ಯರು-3, ಕಾರ್ಮಿಕ ಪ್ರತಿನಿಧಿಗಳು -3 ಹಾಗೂ ಉದ್ಯೋಗದಾತರು -3, ಹೀಗೆ ಒಟ್ಟು ಒಂಬತ್ತು ಜನರ) ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಸ್ವಾಭಾವಿಕ ನ್ಯಾಯತತ್ವಗಳನ್ನು ಪರಿಪಾಲಿಸಿ, ಪಕ್ಷಗಾರರ ವಾದಗಳನ್ನು ಆಲಿಸಿ, ಎಲ್ಲಾ ವಿವಾದಾಂಶಗಳನ್ನು ಹಾಗೂ ಕೆಲಸದ ಕೌಶಲ್ಯದ ವರ್ಗವನ್ನು ಸಹ ವಿಶ್ಲೇಷಿಸಿ ಎರಡು ತಿಂಗಳ ಅವಧಿಯೊಳಗೆ ನೀಡುವ ಕನಿಷ್ಠ ವೇತನ ದರದ ವರದಿಯನ್ವಯ ಕ್ರಮವಹಿಸತಕ್ಕದ್ದು. ಸದರಿ ವರದಿಯ ಅನುಷ್ಠಾನಕ್ಕಾಗಿ "ಸಕ್ಷಮ ಅಧಿಕಾರಿ"ಯನ್ನು ಉದ್ಯೋಗದಾತರು ನಿಯುಕ್ತಿಗೊಳಿಸತಕ್ಕದ್ದು. ಸಕ್ಷಮ ಅಧಿಕಾರಿಯ ವರದಿ ಅನುಷ್ಠಾನ ಕ್ರಮದ ಬಗ್ಗೆ ಅಥವಾ ವರದಿಯ ಬಗ್ಗೆ ವಿವಾದವಿದ್ದಲ್ಲಿ, ಈ ಕುರಿತು "ಮೇಲ್ಮನವಿ ಪ್ರಾಧಿಕಾರಿ"ಯನ್ನು ಸಹ ನಿಯುಕ್ತಿಗೊಳಿಸಿ, ಉದ್ಯೋಗದಾತರು ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಒಂದು ತಿಂಗಳ ಕಾಲಮಿತಿಯೊಳಗೆ 'ಸಕ್ಷಮ ಪ್ರಾಧಿಕಾರಿ' ಹಾಗೂ 'ಮೇಲ್ಮನವಿ ಪ್ರಾಧಿಕಾರಿ' ಗಳು ಸ್ವಾಭಾವಿಕ ನ್ಯಾಯತತ್ವಗಳನ್ವಯ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮವಹಿಸತಕ್ಕದ್ದು. 'ಮೇಲ್ಮನವಿ ಪ್ರಾಧಿಕಾರಿ' ಯ ನಿರ್ಣಯವು ಅಂತಿಮವಾಗಿದ್ದು, ಅದನ್ನು ಪಾಲಿಸಲು ಎಲ್ಲಾ ಪಕ್ಷಗಾರರು ಬಾಧ್ಯಸ್ಥರಿರುತ್ತಾರೆ.

6. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು. ಈ ಬಗ್ಗೆ ವಿವಾದವಿದ್ದಲ್ಲಿ ಮೇಲ್ಕಂಡ ಷರತ್ತು ಸಂಖ್ಯೆ-5 ರಲ್ಲಿಯ ವಿವಾದ-ಪರಿಹಾರ ವ್ಯವಸ್ಥೆಯನ್ನು ಉದ್ಯೋಗದಾತರು ಸೃಷ್ಟಿಸಿ, ಕಾನೂನುಸಮ್ಮತ ಪರಿಹಾರವನ್ನು ರೂಪಿಸತಕ್ಕದ್ದು.

7. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಕಾರ್ಮಿಕರು ಕೆಲಸ ನಿರ್ವಹಿಸಿದ್ದಲ್ಲಿ, ಅಂತಹ ಕಡಿಮೆ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿರುವ ದಿನವೊಂದರ ಕನಿಷ್ಠ ವೇತನವನ್ನು ಗಂಟೆಗಳ ಕನಿಷ್ಠ ವೇತನವನ್ನಾಗಿ ಲೆಕ್ಕ ಹಾಕಿ, ಸಂಬಂಧಿಸಿದ ಕಾರ್ಮಿಕರಿಗೆ ಉದ್ಯೋಗದಾತರು ಪಾವತಿಸತಕ್ಕದ್ದು.

8. **ಕನಿಷ್ಠ ವೇತನದ ಪಾವತಿಯ ವಿಧಾನ :** ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

9. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ-1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

10. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

11. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

1. ನೌಕರರ ರಾಜ್ಯ ವಿಮಾ ಕಾಯ್ದೆ-1948
2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ-1952

12. **ರಜಾದಿನದಲ್ಲಿಯ ದುಡಿಮೆಯ ವೇತನ :** ಉದ್ಯೋಗದಾತರ ಸಂಸ್ಥೆಯಲ್ಲಿ ಶಾಸನದನ್ವಯ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಲ್ಲಿಯ ಪ್ರಾವಧಾನಗಳು ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ) ಕಾಯ್ದೆ-1963ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

13. **ಹೆಚ್ಚುವರಿ ಅವಧಿ ದುಡಿಮೆಯ ವೇತನ**: ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ–1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು

14. **ಅಪ್ರೆಂಟೈಸ್ ಅವಧಿಯ ವೇತನ** : ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ಸೇವಾನುಭವ ಪಡೆಯುವುದಕ್ಕಾಗಿ ದಿ ಅಪ್ರೆಂಟೈಸ್ ಕಾಯ್ದೆ –1961 ರ ಪ್ರಾವಧಾನಗಳನ್ವಯ ತರಬೇತಿ ಪಡೆಯುವ ಅಪ್ರೆಂಟೈಸ್‌ಗಳಿಗೆ ದಿ ಅಪ್ರೆಂಟೈಸ್ ಕಾಯ್ದೆ–1961 ರ ಪ್ರಾವಧಾನಗಳನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

15. **ಸ್ಥಾಯಿ ಆದೇಶಗಳಲ್ಲಿಯ ಪ್ರಾವಧಾನಗಳನ್ವಯ ತರಬೇತಿ ಅವಧಿಯ ವೇತನ**: ಯಾವುದೇ ಉದ್ಯೋಗದಾತರ ಸಂಸ್ಥೆಯಲ್ಲಿ ತರಬೇತಿ, ಪಡೆಯುವ ಉದ್ಯೋಗಿಗಳಿಗೆ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆ, 1946 ಹಾಗೂ ಅದರಡಿಯ ಕರ್ನಾಟಕ ನಿಯಮಗಳನ್ವಯ ಪ್ರಮಾಣೀಕೃತ ಸ್ಥಾಯಿ ಆದೇಶಗಳಲ್ಲಿ ಅಥವಾ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗಧಿತವಾದ **"ತರಬೇತಿ ಅವಧಿ"** ಯಲ್ಲಿ ಈ ಅಧಿಸೂಚನೆಯ ಮೂಲಕ ನಿಗಧಿಗೊಳಿಸಿದ ಕನಿಷ್ಠ ವೇತನದ ಶೇಕಡಾ 75 (ಎಪ್ಪತ್ತೈದು) ರಷ್ಟು ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

16. **ಸರ್ಕಾರದ ಯೋಜನೆ / ಕಾರ್ಯಕ್ರಮದಡಿಯಲ್ಲಿ ಹಾಗೂ ಸಾಮಾನ್ಯ ತರಬೇತಿಯ ಅವಧಿಯ ವೇತನ**: ಮೇಲ್ಕಂಡ ಷರತ್ತು ಸಂಖ್ಯೆ 11 ಹಾಗೂ 12 ನ್ನು ಹೊರತುಪಡಿಸಿ, ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಈ ಅಧಿಸೂಚನೆಯಡಿ ನಿಗಧಿಪಡಿಸಿದ ಕೆಲಸದ ಸ್ವರೂಪಗಳಿಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸತಕ್ಕದ್ದು. ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ ಯಾವುದೇ ತರಬೇತಿಗಾಗಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದು, ಸದರಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಉದ್ಯೋಗದಾತರು ಅನುಷ್ಠಾನಗೊಳಿಸುತ್ತಿದ್ದಲ್ಲಿ, ಸದರಿ ಯೋಜನೆಗಳಡಿಯಲ್ಲಿ/ ಕಾರ್ಯಕ್ರಮದಡಿಯಲ್ಲಿ ನಿಗಧಿಪಡಿಸಿರುವ ವೇತನವನ್ನು ಉದ್ಯೋಗದಾತರು ತರಬೇತಿ ಪಡೆಯುವವರಿಗೆ ಪಾವತಿಸತಕ್ಕದ್ದು.

17. **ರೂಢಿಗತ ಸೌಲಭ್ಯಗಳ ಮುಂದುವರಿಕೆ**: ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಡಿ ಮತ್ತು ಪದ್ಧತಿಯನ್ವಯ ವಸ್ತು ರೂಪದಲ್ಲಿ ಯಾವುದೇ ಸಂಭಾವನೆಯನ್ನು ಉದ್ಯೋಗದಾತರಿಂದ ಕಾರ್ಮಿಕರು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆಸಲು ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**18. ದಿವ್ಯಾಂಗ ಕಾರ್ಮಿಕರ ವೇತನ**: ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ–1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

19. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ**: ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲ ಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು

**20. ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ**: ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

**ಅ. ಅತಿ ಕುಶಲ**: ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿ ಕೊಂಡು ಹೋಗಬಲ್ಲವರಾಗಿರಬೇಕು.

**ಆ. ಕುಶಲ**: ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

**ಇ. ಅರೆ ಕುಶಲ** : ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

**ಈ. ಕುಶಲರಲ್ಲದವರು** : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

21. **ಭೌಗೋಳಿಕ ಪ್ರದೇಶಗಳ ವರ್ಗೀಕರಣ**: ಕನಿಷ್ಠ ವೇತನ ದರಗಳನ್ನು ರಾಜ್ಯದ ನಾಲ್ಕು (04) ಭೌಗೋಳಿಕ ಪ್ರದೇಶವಾರು ಆಧಾರದ ಮೇಲೆ ಅಧಿಸೂಚಿಸಲಾಗಿದ್ದು, ಈ ಭೌಗೋಳಿಕ ಪ್ರದೇಶಗಳ ವಿವರಣೆಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ;

| | | |
|---|---|---|
| ಅ | **ವಲಯ – 1** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು. |
| ಆ | **ವಲಯ – 2** | ವಲಯ–1 ಅನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಸೂಚಿತ ಪ್ರದೇಶಗಳು |
| ಇ | **ವಲಯ – 3** | ವಲಯ–1 ಹಾಗೂ ವಲಯ–2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ಈ | ವಲಯ – 4 | ವಲಯ–1, ವಲಯ–2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಎಲ್ಲಾ ಪ್ರದೇಶಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಲ್.ಎಸ್. ಶ್ರೀಕಂಠಬಾಬು**
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

**PR-59**
**SC-200**